ಇ) ಔರಾದ ಗ್ರಾಮದ ಸರ್ವೆ ನಂ. 133:ಎ, ಬಿಗಳಲ್ಲಿ 3 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಕಂದಾಯ ಇಲಾಖೆಯು ದಿನಾಂಕ : 7.8.98ರಂದು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದೆ. ದಿನಾಂಕ : 21.1.93ರಂದುಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು ನಿವೇಶ ದೊರೆಯದ ಕಾರಣ ಗುತ್ತಿಗೆಯನ್ನು ರದ್ದುಪಡಿಸಲಾಗಿದೆ.

ಈ) ರೂ. 51.75 ಲಕ್ಷ ರೂ.ಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡುವಂತೆ ದಿನಾಂಕ: 7.10.97ರಂದು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಉ) ನಿವೇಶನ ಒದಗಿಸುವ ವಿಳಂಬವಾದ್ದರಿಂದ ಕೆಲಸ ಪ್ರಾರಂಭಿಸಲಾಗಲಿಲ್ಲ.

ಊ) ಆಯವ್ಯಯದಲ್ಲಿ ಮೀಸಲಿರಿಸಿರುವ ಹಣವನ್ನು ಆಯಾ ವರ್ಷದಲ್ಲಿ ಖರ್ಚು ಮಾಡದಿದ್ದಲ್ಲಿ ಹಣಕಾಸಿನ ವರ್ಷ ಮುಗಿದ ನಂತರ ಆ ಹಣ ರದ್ದಾಗುತ್ತದೆ.

ಋ) ಕೆಲಸ ಪ್ರಾರಂಭವಾದ ದಿವಸದಿಂದ ಸುಮಾರು 18 ತಿಂಗಳುಗಳು.

ಮೀನುಗಾರರ ಬೋಟಿಗೆ ಸೀಮೆ ಎಣ್ಣೆ ವಿತರಣೆ

559 (912) ಶ್ರೀ ಕೆ.ಗೋಪಾಲ ಪೂಜಾರಿ (ಬೈಂದೂರು): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೀನುಗಾರರ ಬೋಟಿಗೆ ಸೀಮೆ ಎಣ್ಣೆ ವಿತರಿಸಲಾಗುತ್ತಿದೆಯೇ ?

ಆ) ಹಾಗಿದ್ದಲ್ಲಿ, ತಿಂಗಳಿಗೆ ಎಷ್ಟು ಲೀಟರ್ ವಿತರಿಸಲಾಗುತ್ತಿದೆ.

ಇ) ಅಗತ್ಯವಿರುವ ತಿಂಗಳಿಗೆ 400 ಲೀಟರ್ ಸೀಮೆ ಎಣ್ಣೆ ವಿತರಿಸಲಾಗುವುದೇ.

ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು

ಶ್ರೀ ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಹೌದು.

ಆ) 120 ರಿಂದ 180 ಲೀಟರ್

ಇ) ಸದ್ಯಕ್ಕೆ ಇಲ್ಲ.

ಈ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಈ ಉದ್ದೇಶಕ್ಕಾಗಿ ನೀಡಲು ಕೇಂದ್ರ ಸರ್ಕಾರವು ಹೆಚ್ಚುವರಿಯಾಗಿ ಸೀಮೆಎಣ್ಣೆಯನ್ನು ಬಿಡುಗಡೆಮಾಡಬೇಕಿದೆ.